‘ರಂಡೀ ಮಗಳು ಅಂತೀಯಾ? ಯಾರಿಗ್ಗೊತ್ತೊ, ಯಾರ ಹಾದರದ ಪಿಂಡೊ?’

‘ಯಾರದೋ ಅಂತಾನೇ ತಿಳ್ಕೋ. ಇದರೊಳಗ ಪದ್ಮಾಂದೇನ್ ತಪ್ಪದ?’

‘ಅಲ್ಲೋ, ಮೂರಕಾಸಿನ ಹೆಂಗಸಿನ ಪರಾವಹಿಸಿ ಮಾತಾಡ್ತೀಯಲ್ಲಾ, ನಿನಗ ಹಡದವ್ವನಕ್ಕಿಂತ ಆಕೀನೇ ಹೆಚ್ಚಾದಳೇನು?’

‘ಅವಳ ಪರ ನಾನು ಮಾತಾಡದೇ ಇನ್ಯಾರು ಮಾತಾಡ್ಬೇಕವಾ?’

‘ಚಪ್ಪಲೀನ ಎಲ್ಲಿಡಬೇಕೊ ಅಲ್ಲೇ ಇಡ್ಬೇಕು. ಅವನ್ನ ತಂದು ಜಗುಲಿಮ್ಯಾಲ ಇಡ್ಲಿಕ್ಕೆ ಹೊಂಟೀಯಲ್ಲಾ? ಧರ್ಮಲಂಢನ್ನ ತಂದು’.

‘ಹಂಗಲ್ಲವ್ವಾ... ಅದೂ...’

‘ಹಂಗೂ ಅಲ್ಲಾ, ಹಿಂಗಿನ ಬೇರೂ ಅಲ್ಲಾ’ ಗೋಡೆಯಕಡೆ ಮುಖ ತಿರುಗಿಸಿದಳು.

‘ನಮಗೊಂದು ಹೆಣ್ಣುಮಗೂ ಐತಿ ಅಂಬೋ ಖಬರಾದ್ರೂ ಇರ್ಲಿ. ನಾವು ಪಾತರದಾವ್ರ ಸಂಬಂಧಿಕರು ಅಂತಂದ್ರ ಯಾವ ಬ್ರಾಹ್ಮಣ ಹುಡುಗ್ರು ಮದ್ವಿ ಮಾಡಿಕೊಳ್ಳಾಕ ಮುಂದ್ ಬರ್ತಾರ?’ ಲಕ್ಷ್ಮಿಗೆ ಬಗಲಲ್ಲಿರುವ ಒಂದು ವರ್ಷದ ಮಗಳ ಮದುವೆಯ ಚಿಂತೆ.

‘ಕಲ್ತವಳಾಗಿ ನೀನೂ ಹಂಗೆ ಮಾತಾಡ್ತೀಯಲ್ಲೇ ಲಕ್ಷ್ಮೀ?’

‘ನೋಡ್ರೀ, ಕೊನೆಯದಾಗಿ ಹೇಳ್ತೀನಿ, ನೀವು ನಿಮ್ಮ ಹಟಾ ಸಾಧಿಸೋದೇ ಆದ್ರೆ, ಈ ಹೆಣ್ಣಕೂಸಿನ ಮ್ಯಾಲ ಆಣೀಮಾಡಿ ಹೇಳ್ತೀನಿ, ನಾವಿಬ್ಬರೂ ತಾಯಿ ಮಗಳು ನದಿಗೆ ಹಾರ್ಕೊಂಡು ಪ್ರಾಣಾಬಿಡ್ತೀವಿ’ ರೊಯ್ಯೆಂದು ಅಳತೊಡಗಿದಳು. ಅವಳು ಅಳುವುದು ಕಂಡು, ಕೂಸೂ ಗಾಬರಿಯಿಂದ ಅಳತೊಡಗಿತು.

‘ನಾನು... ಹಾಂ, ನಾನೂ... ಮ್ಯಾಲಿನ ನಿನ್ನ ಖೋಲಿ ಜಂತಿಗೆ ಉರ್ಲಹಾಕ್ಕೊಂಡು ಸಾಯ್ತೀನಿ. ಆಮ್ಯಾಲ್ ನೀವೇ ನೀವು, ಅಣ್ಣಾ ತಂಗೀ ಇಬ್ರೂ ಆರಾಮ್ ಇರ್ರೀ’ ಅವ್ವ ಕೆಂಜಗಣ್ಣು ಮಾಡಿಕೊಂಡು ಗರ್ಜಿಸಿದಳು.

* * *

ಅಲ್ಲಿ ಇಲ್ಲಿ ಸುತ್ತಾಡಿ, ಕೊನೆಗೆ ಮನೆ ಸೇರಿದಾಗ, ರಾತ್ರಿ ಹನ್ನೊಂದು ಕಾಲು. ಲಕ್ಷ್ಮೀ ಮುಖ ಇನ್ನೂ ಉಬ್ಬಿಕೊಂಡಿದೆ.

‘ಎಷ್ಟೊತ್ತೋ ಬರೂದು?’ ಮಲಗಿದ್ದಲ್ಲಿಂದಲೆ ಅವ್ವ ಗೊಣಗಿದಳು. ಶೂ ಬಿಚ್ಚದೆ, ಅಟ್ಟದ ಮೇಲೇರಿ ತನ್ನ ಕೋಣೆಗೆ ಬಂದ. ಡ್ರೆಸ್ಸೂ ಬದಲಿಸದೆ. ದೊಪ್ಪೆಂದು ಮಂಚದ ಮೇಲೆ ಬಿದ್ದುಕೊಂಡ.

‘ಒಂದ್ ದೇವ್ರನ್ನಾಂಗಿಲ್ಲಾ, ದಿಂಡ್ರನ್ನಾಂಗಿಲ್ಲಾ ಎಂಥಾ ಬ್ರಾಂಬ್ರ ಮನೀ ಆಗಿಹೋಯ್ತೋ! ರಾಮ್ ರಾಮಾ’ ಬೂಟು ಹಾಕಿಕೊಂಡು ಮನೆಯೊಳಗೆ ಬಂದುದಕ್ಕೊ, ಇಲ್ಲ, ಪದ್ಮಳ ವಿಷಯಕ್ಕಿದೀತೋ, ಆಕೆಯ ಸಿಡಿಮಿಡಿ. ತಲೆಕೆಡಿಸಿಕೊಳ್ಳಲಿಲ್ಲ.

‘ಊಟಕ್ಕ ಬರ್ತೀರೊ ಏನ್ ಮ್ಯಾಲೆನೇ ಬರ್ಬೇಕೊ..?’ ಲಕ್ಷ್ಮೀ ಕೂಗಿದಳು. ‘ನನಗ್ ಹಸಿವಿಲ್ಲಾ’. ಎಂದೂ ಇಲ್ಲದ ಕಠೋರತೆ ತನ್ನ ಧ್ವನಿಯಲ್ಲಿ ಬಂದಿತೆನಿಸಿ. ಆಶ್ಚರ್ಯವಾಯಿತು ಅವನಿಗೆ. ಯಃಕಶ್ಚಿತ್ತ ಅಂದ್ಕೊಂಡಿದ್ದು ಹೀಗೆಲ್ಲ ತನ್ನನ್ನು ಅಟ್ಟಾಡಿಸುತ್ತ, ಸರ್ಪಸುತ್ತು ಹುಣ್ಣಿನಂತೆ ಮೈಯೆಲ್ಲ ಸುತ್ತಿಕೊಂಡು ಮುದ್ದೆಮಾಡಿ ಬಿಡುತ್ತದೆ ಅಂದುಕೊಂಡಿರಲಿಲ್ಲ. ಅವ್ವ, ಲಕ್ಷ್ಮಿಯರನ್ನು ಹೇಗೋ ಮ್ಯಾನೇಜ್ ಮಾಡಿದರಾಯ್ತು. ಒಂದೆರಡು ದಿನ ಮುನಿಸಿಕೊಂಡು, ನಂತರ ಸುಮ್ಮನಾಗುತ್ತಾರೆ ಅಂದ್ಕೊಂಡಿದ್ದರೆ, ಈಗ ಅವರಾಡುವ ಹೆದರಿಕೆಯ ಮಾತುಗಳು ತಿರುಗಣಿ ಮಡುವಿಗೆ ತಳ್ಳಿಬಿಟ್ಟವೆ. ಇತ್ತ ಪದ್ಮ ಪತ್ರದ ಮೇಲೆ ಪತ್ರ ಬರೆಯುತ್ತ, ಸವಾಲು ಹಾಕುತ್ತಿದ್ದಾಳೆ.

ಹಾಗೇಯೆ ಚಿಂತಿಸುತ್ತ, ಮೇಲ್ಮುಖವಾಗಿ ಮಲಗಿದ್ದವನ ದೃಷ್ಟಿ ಜಂತಿಯ ಮೇಲೆ. ಅದೇ ಜಂತಿಯ ಮೇಲೆ... ಕೂಡಲೆ ಅವ್ವ ಹೆದರಿಸುತ್ತಿದ್ದದ್ದು ನೆನಪಾಗಿ, ಲಕ್ಷ್ಮಿಯ ಜತೆ ಮುಗ್ಧಮಗುವಿನ ಮುಖ ಮುಂದೆಬಂದು, ಹರಿಯುವ ನದಿಯಲ್ಲಿ ಅವರಿಬ್ಬರು ಹೆಣವಾಗಿ ತೇಲತೊಡಗಿ...

‘ಮೂರು ಅಮಾಯಕರ ಸಾವಿಗೆ ಕಾರಣನಾದ ಪ್ರಾಧ್ಯಾಪಕ’ ಟೀವಿ, ಪತ್ರಿಕೆಗಳಲ್ಲಿ ಸುದ್ದಿಯಾಗಿ...ಛೇ! ಕಲ್ಪಿಸಿಕೊಳ್ಳಲೂ ಭಯವಾಗುತ್ತದೆ.

‘ನೀವು ವರ್ಣ ನಂಬೋರು. ವರ್ಣಕ್ಕ ಬಣ್ಣ ಅಂಬೋ ಅರ್ಥಾನೂ ಅದ. ಅರ್ಥ ಒಂದೇ ಇದ್ದರೂ, ಅದರಿಂದ ಉದ್ಭವಿಸುವ ಭಾವ ಮಾತ್ರ ಬೇರೇನೆ?’ ಪದ್ಮ ಕೂಗಿ ಹೇಳುತ್ತಿದ್ದರೆ... ಮಂಚದಮೇಲೆ ಮಲಗಿರುವ ವಸಂತ, ಮಗ್ಗಲು ಬದಲಿಸಲು ಪ್ರಯತ್ನಸುತ್ತಲೇ ಇದ್ದ.

●